


International Journal of Kannada Research
www.kannadajournal.com

**ISSN: 2454–5813**
IJKR 2024; 10(3): 103-106
© 2024 IJKR
www.kannadajournal.com
Received: 03-06-2024
Accepted: 06-07-2024

**ಡಾ. ಯೋಗೇಶ ಎನ್**
ಸಹ ಸಂಪಾದಕರು ವಿಶ್ವಕೋಶ ವಿಭಾಗ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು, ಕರ್ನಾಟಕ, ಭಾರತ

**Corresponding Author:**
**ಡಾ. ಯೋಗೇಶ ಎನ್**
ಸಹ ಸಂಪಾದಕರು ವಿಶ್ವಕೋಶ ವಿಭಾಗ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು, ಕರ್ನಾಟಕ, ಭಾರತ

# ವಿಚಾರ ಪತ್ನಿ ನೀಲಾಂಬಿಕೆ

**ಡಾ. ಯೋಗೇಶ ಎನ್**

**DOI:** https://doi.org/10.22271/24545813.2024.v10.i3b.1026

**ಪೀಠಿಕೆ**

ಮಹಿಳೆಯರಿಗೂ – ವೈಚಾರಿಕತೆಗೂ ಬಹಳ ದೂರವಿದ್ದ ಕಾಲದಲ್ಲಿ ಸಾವಿರಾರು ಮಹಿಳೆಯರನ್ನು ವಿಚಾರವಾದಿಗಳನ್ನಾಗಿ ಮಾಡಿದ್ದು ೧೨ನೇ ಶತಮಾನದ ಶರಣರ ಕಾಲಘಟ್ಟ. ಭಾವ, ಭಾಷೆ, ಅಭಿವ್ಯಕ್ತಿಯ ದೃಷ್ಟಿಯಿಂದ ಈ ಕಾಲಘಟ್ಟದ ವಚನ ಪ್ರಕಾರ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಮಹತ್ತರ ಕೊಡುಗೆಯನ್ನು ನೀಡಿದ್ದು ಒಂದು ಐತಿಹಾಸಿಕ ದಾಖಲೆಯಾದರೆ, ಸ್ತ್ರೀ ತಾನು ಸ್ತ್ರೀಯೆಂಬ ಲಿಂಗಭೇದವ ಅಳಿದು, ಅರಿವನ್ನು ಕಂಡುಕೊಂಡದ್ದು ಮತ್ತೊಂದು ಮಹತ್ವದ ದಾಖಲೆ. ಮಾನವೀಯ ನೆಲೆಯಲ್ಲಿ ಮಹಿಳೆಯರ ನೋವನ್ನು ಅರಿತು, ಹೆಣ್ಣು–ಪುರುಷನಷ್ಟೇ ಸಮಾನವೆಂದು ಬಗೆದು, ಆಕೆಯ ವ್ಯಕ್ತಿತ್ವ ವಿಕಾಸಕ್ಕೆ ಸೂಕ್ತ ಪರಿಸರ ನಿರ್ಮಾಣ ಮಾಡಿಕೊಟ್ಟವರು ಶರಣರು. ಹೆಣ್ಣೆಂದರೆ ಕೇವಲ ಮೂಢನಂಬಿಕೆ ಅಂಧ ಸಂಪ್ರದಾಯದ ಪ್ರತೀಕವೆಂದು ಭಾವಿಸಿದ ಕಾಲದಲ್ಲಿ ಹೆಣ್ಣಿಗೆ ಹೊಸ ಆಯಾಮ ನೀಡಿದ ಶರಣರು, ಎಲ್ಲ ಕ್ಷೇತ್ರಗಳಲ್ಲೂ ಆಕೆ ಬೆಳೆಯಲು ಪ್ರೋತ್ಸಾಹಿಸಿದರು. "ನಡುವೆ ಸುಳಿವ ಆತ್ಮ ಹೆಣ್ಣು ಅಲ್ಲ ಗಂಡೂ ಅಲ್ಲ" ಎಂಬ ಸರ್ವಸಮಾನತೆ, ಸ್ವಾತಂತ್ರ್ಯದ ನೆಲೆಯಲ್ಲಿ ಹೆಣ್ಣು ಅವಕಾಶಗಳನ್ನು ಪಡೆಯತೊಡಗಿದಳು. ಪರಿಣಾಮವಾಗಿ ಅವರಲ್ಲಿ ಸ್ವತಂತ್ರವಾಗಿ ವಿಚಾರಮಾಡುವ ಶಕ್ತಿ ಬೆಳೆಯಿತು. ಅದರ ಫಲವಾಗಿ ಬೆಳೆದು ನಿಂತವರೇ ವಿಚಾರ ಪತ್ನಿಯರು.

ಶರಣೆಯರಲ್ಲಿ ಅನೇಕ ವಿಚಾರ ಪತ್ನಿಯರು ಕಾಣಸಿಗುತ್ತಾರೆ. ಅವರಲ್ಲಿ ಪ್ರಮುಖವಾಗಿ ಕಾಣಸಿಗುವವಳು ನೀಲಾಂಬಿಕೆ.

ಪಾರ್ವತಿಯ ರೂಪ ಕಂಡು ಪರಶಿವನ ಸಂಗ ನಿಸ್ಸಂಗವಾಗಿ
ತಾಯಿ ಮಗನಂಗದಿಂದ ತನುವಳಿದು ನಿರಾಭಾರರೂಪವನೆಯ್ದು
ಬಸವನ ಅನುಭವದಿಂದ ವಿವರವ ಕಂಡು
"ವಿಚಾರಪತ್ನಿ"ಯಾದೆನಯ್ಯಾ ಸಂಗಯ್ಯಾ

ತಾನು ವಿಚಾರಪತ್ನಿಯಾದ ವಿವರವನ್ನು ಈ ವಚನದಲ್ಲಿ ಕಟ್ಟಿಕೊಡುವ ನೀಲಾಂಬಿಕೆ ಬಸವಣ್ಣನವರ ಎರಡನೆಯ ಹೆಂಡತಿ. 'ವಿಚಾರಪತ್ನಿ' ಎಂಬ ಶಬ್ದ ವಚನ ಸಾಹಿತ್ಯದ ಸಂದರ್ಭದಲ್ಲಿ ಹೊಸ ಪರಿಭಾಷೆಯಾಗಿ ಕಂಡುಬಂತು. ನೀಲಾಂಬಿಕೆಯ ಮೂಲಕ ಅಭಿವ್ಯಕ್ತಗೊಂಡ ಈ ಹೊಸ ಪರಿಭಾಷೆ ೧೨ನೇ ಶತಮಾನದಲ್ಲಿಯೇ ದಾಂಪತ್ಯ ಬದುಕೆಂಬುದು ಎಂತಹ ವಿಶಿಷ್ಟ ಹಾಗೂ ಅಪೂರ್ವ ಮಾದರಿಯಾಗಿತ್ತೆಂಬುದಕ್ಕೆ ನಿದರ್ಶನವಾಗಿದೆ. 'ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎಂಬಂತೆ ಸಂಸಾರಿಗಳಾಗಿಯೂ ಶಿವಪ್ರೀತಿ ಪಡೆದ ಜೇಡರ ದಾಸಿಮಯ್ಯ – ದುಗ್ಗಳೆ, ಆಯ್ದಕ್ಕಿ ಮಾರಯ್ಯ – ಲಕ್ಕಮ್ಮ, ಮೋಳಿಗೆಯ ಮಹಾದೇವಿ – ಮಹಾದೇವ, ಹಡಪದ ಅಪ್ಪಣ್ಣ – ಲಿಂಗಮ್ಮ ಮೊದಲಾದ ದಂಪತಿಗಳಂತೆ ಬಸವಣ್ಣನವರ ಬದುಕಿನಲ್ಲಿ ನೀಲಾಂಬಿಕೆ "ಪೃಥ್ವಿಗಗ್ಗಳದ ಚೆಲುವಿನ ವಿಚಾರ ಪತ್ನಿ"ಯಾದಾಕೆ 'ಬಸವಣ್ಣನವರ ಅನುಭವವನ್ನು ಹೊದ್ದು ಅವರ ನಡೆ–ನುಡಿ–ಸಿದ್ಧಾಂತ ಗಮನಿಸಿ ಆ ವಿವರಗಳನ್ನೆಲ್ಲಾ ಓದಿ, ತರ್ಕಿಸಿ, ಅರ್ಥೈಸಿಕೊಂಡು ಬಳಿಕ ನಾವು ಅವರಿಗೆ ವಿಚಾರ ಪತ್ನಿಯಾದೆನು' ಎನ್ನುವ ನೀಲಾಂಬಿಕೆಯ ವೈಚಾರಿಕತೆಯ ನಿಲುವು, ಅನುಭಾವದ ಎತ್ತರ, ವಚನಾಭಿವ್ಯಕ್ತಿ ಹೊಸ ಹೊಳಹುಗಳನ್ನು ನೀಡುವಂತವು.

ನೀಲಮ್ಮ, ನೀಲಾಂಬಿಕೆ, ನೀಲಲೋಚನೆ, ಮಾಯಾದೇವಿ – ಈ ಹೆಸರುಗಳಿಂದ ಕರೆಯಲ್ಪಡುವ ಈಕೆ ಬಸವಣ್ಣನವರ ದಾಂಪತ್ಯ ಜೀವನದಲ್ಲಿ ಬಹಳ ಮಹತ್ವದ ಹೆಜ್ಜೆ ಇಟ್ಟವರು. ಮೊದಲನೆಯ ಹೆಂಡತಿಯಾದ ಗಂಗಾಂಬಿಕೆ ಸೋದರ ಮಾವನಾದ ಬಲದೇವನ ಮಗಳೆಂದು ಸ್ಪಷ್ಟವಿದೆ. ಆದರೆ ನೀಲಾಂಬಿಕೆ ಸಿದ್ಧರಸರ ಮಗಳೆ ಅಥವಾ ಬಿಜ್ಜಳನ ತಂಗಿಯೇ ಎಂಬ ವಿಚಾರವಾಗಿ ಕೆಲ ಭಿನ್ನಮತಗಳಿವೆ. 'ಗುರುರಾಜ ಚಾರಿತ್ರ', 'ಸಿಂಗಿರಾಜಪುರಾಣ', 'ವೀರಶೈವಾಮೃತ ಪುರಾಣ' ಮೊದಲಾದ ಕೃತಿಗಳು ನೀಲಾಂಬಿಕೆ ಸಿದ್ಧರಸನ ಮಗಳೆಂದು ಸಮರ್ಥಿಸುವುದರ ಜೊತೆಗೆ ಸಿದ್ಧರಸನೂ ಅಣ್ಣ ಬಲದೇವನಂತೆ ಬಿಜ್ಜಳನ ಮಂತ್ರಿಯೂ ಆಗಿದ್ದನೆಂದು ಉಲ್ಲೇಖಿಸಿವೆ. ಸಹಜವಾಗಿ ಮಂತ್ರಿಯಾದವನು ರಾಜನಿಗೂ ಆತನ ಕುಟುಂಬಕ್ಕೂ ಹತ್ತಿರವಾಗಿರುತ್ತಾನೆ. ಹಾಗಾಗಿ ತಾಯಿಯಿಲ್ಲದ ಬಿಜ್ಜಳನ ತಮ್ಮ ಕರ್ಣದೇವನನ್ನು ಸಿದ್ಧರಸ ಹಾಗೂ ಆತನ ಪತ್ನಿ ಪದ್ಮಗಂಧಿ ಸಾಕಿದ್ದರಿಂದ ಬಿಜ್ಜಳನಿಗೆ ನೀಲಾಂಬಿಕೆ ಸಹೋದರಿ ಸ್ಥಾನ ತುಂಬಿದಳು ಎಂಬ ಕಲ್ಪನೆಗೆ ಅವಕಾಶವಿದೆ. ಮುಂದೆ "ಬಿಜ್ಜಳನು ನೀಲಾಂಬಿಕೆಗೆ ಲಿಂಗಧಾರಣೆ ಮಾಡಿಸಿ ಬಸವಣ್ಣನವರಿಗೆ ಮದುವೆ ಮಾಡಿದನೆಂಬ ಸಂಗತಿಯನ್ನು 'ಬಸವ ಶಿಖಾಮಣಿ' ಗ್ರಂಥದ ಆಧಾರದಿಂದ ಮಲ್ಲಿಕಾರ್ಜುನ ಅವರು ತಮ್ಮ 'ಬಸವೇಶ್ವರನ ಕಾಲ' ಕೃತಿಯಲ್ಲಿ ವಿವರಿಸುತ್ತಾರೆ".

ನೀಲಾಂಬಿಕೆಯ ಬದುಕಿನ ವಿವರಗಳು ಸಮಗ್ರವಾಗಿ ತಿಳಿದು ಬರದಿದ್ದರೂ ಬಸವಣ್ಣನವರ ದಾಂಪತ್ಯ ಹಾಗೂ ಬದುಕಿನಲ್ಲಿ ಈಕೆಯ ಪ್ರವೇಶ ಪ್ರಮುಖವಾದುದು ಎಂಬುದನ್ನು ವಚನಸಾಹಿತ್ಯ ಹಾಗೂ ಅನೇಕ ಕಾವ್ಯಗಳು ಸ್ಪಷ್ಟಪಡಿಸುತ್ತವೆ. ಬಸವಣ್ಣನವರ ಬದುಕಿನಲ್ಲಿ ಸಂಪೂರ್ಣವಾಗಿ ಬೆರೆತು ಹೋದ ಇವರು ಬಸವಣ್ಣನವರ ಸಾಮಾಜಿ ಸುಧಾರಣೆ ಮತ್ತು ಧಾರ್ಮಿಕ ಜಾಗೃತಿಯ ಸಂದರ್ಭದಲ್ಲಿ ಜೊತೆಯಾಗಿ ನಡೆದು ನಿಜವಾದ ಅರ್ಥದಲ್ಲಿ ಸಹಧರ್ಮಿಣಿಯಾಗಿ ಹೆಜ್ಜೆ ಹಾಕಿದರು. ಬಸವಣ್ಣನ ಹೆಂಡತಿಯಾಗಿ ಅವರನ್ನೇ ಗುರುವೆಂದು ಸ್ವೀಕರಿಸಿ, ಆಧರಿಸಿ, ಗಂಡನ ಸುಖ – ದುಃಖಗಳಲ್ಲಿ, ಆಗು – ಹೋಗುಗಳಲ್ಲಿ ತನ್ನದೂ ಸಮಪಾಲಿದೆ ಎಂದು ನಡೆದ ಆದರ್ಶ ಸತಿ ನೀಲಾಂಬಿಕೆ. ಬಸವಣ್ಣನವರ ಭಕ್ತಿ ಮತ್ತು ಅನುಭವದ ವಿಸ್ತಾರದಿಂದ ಪ್ರಭಾವಿತರಾಗಿ ಆ ಅನುಭವದ ಮೂಲಕವೇ ತಾನು ಬೆಳೆದು ತಾನು ಕೇವಲ ಬಸವಣ್ಣನ ಮಡದಿ ಮಾತ್ರವಲ್ಲ – ಅದನ್ನು ಮೀರಿದ ಸಂಬಂಧ ಎಂದು ಹೇಳುವ ನೀಲಾಂಬಿಕೆ "ಮಡದಿಯೆನಲಾಗದು ಬಸವಂಗೆ ಎನ್ನನು ಪುರುಷನೆನಾಗದು ಬಸವನ ಎನಗೆ" ಎಂದು ಸ್ಪಷ್ಟಪಡಿಸುತ್ತಾರೆ.

ನೀಲಾಂಬಿಕೆ 'ಸಂಗಯ್ಯ' ಅಂಕಿತದಲ್ಲಿ ವಚನ, ಸ್ವರವಚನ, ಕಾಲಜ್ಞಾನಗಳನ್ನು ಬರೆದಿದ್ದಾರೆ. ಅವರ ೨೮೮ ವಚನಗಳು ಲಭ್ಯವಾಗಿವೆ. ಅವರ ವಚನಗಳಲ್ಲಿ ಜೀವನಾನುಭವ ತುಂಬಿದೆ. ಬಹಳಷ್ಟು ವಚನಗಳು ಬಸವಣ್ಣನವರ ಸ್ತುತಿ ಮತ್ತು ಅವರ ಅಗಲಿಕೆಯನ್ನು ಸ್ತುತಿಸಿವೆ. ಹೆಣ್ಣು, ಮಡದಿ, ಪತಿಯ ಮಹಿಮೆ, ಸಂಸಾರ, ಪತಿ ಸಂಗಮಕ್ಕೆ ಹೋದಾಗಿನ ಅನುಭವ, ತಾನು ಸಂಗಮನಲ್ಲಿಗೆ ಹೋದ ವಿಚಾರ ಮೊದಲಾದ ವಿಷಯಗಳು ಇವರ ವಚನಗಳ ವಸ್ತುಗಳಾಗಿವೆ.

ಬಸವಣ್ಣನವರನ್ನು ತನ್ನ ಇಹಪರದ ಸಂಗಾತಿಯಾಗಿ ಸಂಗಯ್ಯನ ಚೈತನ್ಯವಾಗಿ ಭಾವಿಸಿ ತಾನು ಕ್ರಮಿಸಿದ ಅನುಭವದ ಪಯಣವನ್ನು ನೀಲಾಂಬಿಕೆ ಅನೇಕ ವಚನಗಳನ್ನು ಹೇಳಿಕೊಂಡಿದ್ದಾರೆ. ಬಸವಣ್ಣ ಮತ್ತು ನೀಲಾಂಬಿಕೆಯ ದಾಂಪತ್ಯವು ಲೌಕಿಕ ವಸ್ತು ಸ್ಥಿತಿಯ ಸತಿಪತಿಭಾವವನ್ನು ಮೀರಿದ್ದಾಗಿತ್ತು. ತಾನು ಅಂತಿಂಥ ಪತ್ನಿಯಲ್ಲ ವಿಚಾರಪತ್ನಿ ಎಂದು ಹೇಳಿಕೊಳ್ಳುವ ನೀಲಾಂಬಿಕೆಯ ವಚನವೊಂದು ಇಂತಿದೆ.

ಮಡದಿ ಎನಲಾಗದು ಬಸವಂಗೆ ಎನ್ನನು.
ಪುರುಷನೆನಲಾಗದು ಬಸವನ ಎನಗೆ.
ಉಭಯದ ಕುಳವ ಹರಿದು ಬಸವಂಗೆ ಶಿಶುವಾನಾದೆನು,
ಬಸವನೆನ್ನ ಶಿಶುವಾದನು.
ಪ್ರಮಥರು ಪುರಾತರು ಸಾಕ್ಷಿಯಾಗಿ
ಸಂಗಯ್ಯನಿಕ್ಕಿದ ದಿಬ್ಬವ ಮೀರದೆ ಬಸವನೊಳಗಾನಡಗಿದೆ.

ಒಂದು ಜೀವ ಆಧ್ಯಾತ್ಮದ ಪರಾಕಾಷ್ಠೆಯನ್ನು ಎಷ್ಟರಮಟ್ಟಿಗೆ ಮುಟ್ಟಬಹುದೋ ಅಂತಹ ಸ್ಥಿತಿಯನ್ನು ನೀಲಾಂಬಿಕೆಯ ವ್ಯಕ್ತಿತ್ವ ಅಷ್ಟರಮಟ್ಟಿಗೆ ಮುಟ್ಟಿದೆ. ಸತಿಗೆ ಪತಿ ಶಿಶುವಾಗಿ, ಪತಿಗೆ ಸತಿ ಶಿಶುವಾಗಿ ಪರಿಣಮಿಸಿದ್ದನ್ನು ಹೇಳುತ್ತಾ ಇದಕ್ಕೆಲ್ಲ ಸಕಲ ಪ್ರಮಥರ, ಪುರಾತನರ ಸಾಕ್ಷಿಯನ್ನು ಒದಗಿಸುತ್ತಾರೆ. ಆ ದೇವರು ವಿಧಿಸಿರುವ ನಿಯಮವನ್ನು ಮೀರದೆ, ತನ್ನ ಪತ್ನಿ ಧರ್ಮಕ್ಕೆ ಮೋಸಮಾಡದೆ ಬಸವನೊಳಗೆ ನಾನು ಅಡಗಿದೆ ಎನ್ನುವಲ್ಲಿ ಗಂಡ–ಹೆಂಡಿರ ಸಂಬಂಧ ಆಧ್ಯಾತ್ಮ ಸ್ವರೂಪಿಯಾದುದು ಎಂಬುದು ತಿಳಿಯುತ್ತದೆ.

ಎನಗೆ ಲಿಂಗವು ನೀವೆ ಬಸವಯ್ಯಾ
ಎನಗೆ ಸಂಗವು ನೀವೆ ಬಸವಯ್ಯಾ
ಎನಗೆ ಪ್ರಾಣವು ನೀವೆ ಬಸವಯ್ಯಾ
ಎನಗೆ ಪ್ರಸಾದವು ನೀವೆ ಬಸವಯ್ಯಾ,
ಎನಗೆ ಪ್ರಭೆಯ ಮೂರ್ತಿಯು ನೀವೆ ಬಸವಯ್ಯಾ
ಎನಗೆ ಸಂಗಯ್ಯನು ನೀವೆ ಬಸವಯ್ಯಾ

ನೀಲಾಂಬಿಕೆಯ ಬಹುತೇಕ ವಚನಗಳಲ್ಲಿ ಬಸವಣ್ಣನವರೇ ತುಂಬಿಕೊಂಡಿದ್ದಾರೆ. ತನ್ನ ಪತಿ ಎಂಥವ? ಎಂಥಹ ಸಾಧಕ ಎನ್ನುವುದನ್ನು ಸಾಕಷ್ಟು ವಚನಗಳಲ್ಲಿ ಹೇಳಿಕೊಂಡಿದ್ದಾರೆ. ಆಕೆಯ ವಚನಗಳನ್ನು ಗಮನಿಸಿದಾಗ ತುಂಬ ವಿಶಿಷ್ಟ ವ್ಯಕ್ತಿತ್ವದ ವಚನಕಾರ್ತಿಯಾಗಿ ಕಂಡುಬರುತ್ತಾರೆ. ಮದುವೆಯ ನಂತರ ಆಧ್ಯಾತ್ಮ ಕ್ಷೇತ್ರದಲ್ಲಿ ಬಲು ಎತ್ತರವಾಗಿ ಬೆಳವಣಿಗೆ ಸಾಧಿಸಿದ ನೀಲಾಂಬಿಕೆ ಸಾಹಿತ್ಯಿಕವಾಗಿಯೂ ಅಷ್ಟೇ ಮಹತ್ವದ ವಚನಕಾರ್ತಿಯಾಗಿ ಬೆಳೆದು ನಿಂತರು.

ಮೊದಲೇ ತಿಳಿಸಿದಂತೆ ನೀಲಾಂಬಿಕೆಯ ವಚನಗಳ ತುಂಬೆಲ್ಲ ಬಸವಣ್ಣನವರೇ ಆವರಿಸಿಕೊಂಡಿದ್ದಾರೆ. ಪತಿಯಾಗಿ, ಗುರುವಾಗಿ ನೀಲಾಂಬಿಕೆಯ ವಚನಗಳಲ್ಲಿ ಬಸವಣ್ಣನವರ ವ್ಯಕ್ತಿತ್ವವು ವಿಶಿಷ್ಟವಾಗಿ ಮೂಡಿಬಂದಿದೆ.

"ಅಂಗದ ಸಂಗಿಗನಲ್ಲ ನಮ್ಮ ಬಸವಯ್ಯನು.
ಪ್ರಾಣದ ಭ್ರಮೆಯವನಲ್ಲ ನಮ್ಮ ಬಸವಯ್ಯನು" (ವ–೨)
"ಕಲ್ಲಮಾಲೆಯ ಕಡಿದಾತ ಬಸವಯ್ಯನು
ಕಾಲನ ಗೆಲಿದಾತ ಬಸವಯ್ಯನು" (ವ–೧೩೬)
"ಎರಡಿಲ್ಲದ ವಸ್ತುವೆ ನೀನೆರಡಾದೆಯಲ್ಲ ಬಸವಯ್ಯ
ಎರಡನೇಕೀಕರಿಸಿ ಭ್ರಮೆಯ ಬಿಡಿಸಿದೆಯಲ್ಲ ಬಸವಯ್ಯ" (ವ–೮೯)
"ಎಲೆ ಅಯ್ಯಗಳಿರಾ, ಎಲೆಗಳೆದ ವೃಕ್ಷವ ಕಂಡಿರೆ ಬಸವನ ?
ಎಲೆ ಅಯ್ಯಗಳಿರಾ, ರೂಹಿಲ್ಲದ ಚೋಹವ ಕಂಡಿರೆ ಬಸವನ ?" (ವ–೯೩)

ಹೀಗೆ ಬಸವಣ್ಣನವರು ಮೂರ್ತರೂಪದ ವಿಶಿಷ್ಟವ್ಯಕ್ತಿಯಾಗಿ ವಚನಗಳಲ್ಲಿ ಕಾಣಿಸಿಕೊಂಡಿದ್ದಾರೆ.

ನೀಲಾಂಬಿಕೆಯ ಬದುಕಿನ ಎರಡು ಪ್ರಸಂಗಗಳು ಮತ್ತು ಅವುಗಳಿಗೆ ಆಕೆ ಪ್ರತಿಕ್ರಿಯಿಸಿದ ರೀತಿ ಆಶ್ಚರ್ಯವನ್ನುಂಟುಮಾಡುವಂಥವು.

೧. ನೀಲಾಂಬಿಕೆ – ಬಸವಣ್ಣನವರ ದಾಂಪತ್ಯ ಜೀವನದಲ್ಲಿ 'ಮನೆಗೆ ಕಳ್ಳ ಬಂದ ಪ್ರಸಂಗ' ಪ್ರಸಿದ್ಧವಾದುದು. ಒಮ್ಮೆ ಇವರ ಮನೆಗೆ ಕಳ್ಳನೊಬ್ಬ ಬಂದು ನೀಲಾಂಬಿಕೆಯ ಕಿವಿಯ ಆಭರಣಗಳನ್ನು ಅಪಹರಿಸಲು ಯತ್ನಿಸಿದ. ಭಯದಿಂದ ಆಕೆ ಕಿರುಚಿಕೊಂಡಾಗ ಬಸವಣ್ಣನವರು ಬಂದು "....... ಅಯ್ಯಾ ನಮ್ಮಯ್ಯನ ಕೈ ನೊಂದಿತು ತೆಗೆದುಕೊಡಾ....... ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದೊಡೆ ಕೂಡಲಸಂಗನಲ್ಲದೆ ಮತ್ತಾರು ಅಲ್ಲ" ಎಂದಾಗ ಬಸವಣ್ಣನ ಮಾತಿಗೆ ಪ್ರತಿಯಾಡದೆ ಕಿವಿಯೋಲೆಯನ್ನು ಬಿಚ್ಚಿಕೊಡುತ್ತಾರೆ. ಬಸವಣ್ಣನವರ ಕಠೋರ ಮಾತಿಗೆ ಏನನ್ನು ಪ್ರತಿಕ್ರಿಯಿಸದೆ ಬಸವಣ್ಣನವರ ಮಾತಿಗೆ ಮನ್ನಣೆ ಕೊಟ್ಟದ್ದು, ಗಂಡನ ಮೇಲಿನ ನಂಬಿಕೆ, ವಿಶ್ವಾಸ ಇವೆಲ್ಲವೂ ಆಕೆ ಎಂತಹ ಸಂಸ್ಕಾರವಂತೆ ಹಾಗೂ ಆಕೆಯ ಸಹಧರ್ಮಿಣಿತನ ಎಂತದ್ದು ಎಂಬುದು ತಿಳಿಯುತ್ತದೆ.

೨. ಕಲ್ಯಾಣದಲ್ಲಿನ ಕ್ರಾಂತಿ ನೀಲಾಂಬಿಕೆಗೆ ಬಹುದೊಡ್ಡ ಆಘಾತ. ಕಲ್ಯಾಣದ ಘಟನೆಗಳಿಂದ ಮನನೊಂದ ಬಸವಣ್ಣನವರು ಕೂಡಲಸಂಗಮಕ್ಕೆ ಪಯಣ ಬೆಳೆಸುತ್ತಾರೆ. ಮಡದಿಗೆ ಹೇಳದೆ ಹೋದರೂ ಆಕೆಯ ನೆನಪು ಅಪಾರವಾಗಿ ಅವರನ್ನು ಭಾದಿಸಿದೆ. ಅನಂತರ ಅಪ್ಪಣ್ಣನ ಮೂಲಕ ನೀಲಾಂಬಿಕೆಯನ್ನು ಕರೆತರುವ ಪ್ರಯತ್ನವಾಗುತ್ತದೆ. ಆ ಸಂದರ್ಭ ಆಕೆ ಪ್ರತಿಕ್ರಿಯಿಸಿದ ರೀತಿ ಅಚ್ಚರಿಪಡುವಂಥದ್ದು. ಮಹಾಮನೆಯ ನೇತೃತ್ವದ ಜೊತೆಗೆ, ಬಸವಣ್ಣನವರ ಪ್ರತಿಯೊಂದು ಸಾಮಾಜಿಕ ಕೆಲಸಗಳಲ್ಲೂ ಜೊತೆಗೂಡಿ ನಡೆಯುತ್ತಿದ್ದ ನೀಲಾಂಬಿಕೆ ಬಸವಣ್ಣನಿಲ್ಲದೆ ದುಃಖ ಮೇರೆ ಮೀರಿದ್ದ ಸಂದರ್ಭದಲ್ಲಿ ಅಪ್ಪಣ್ಣನಿಗೆ ಆಕೆ ನೀಡಿದ ಪ್ರತಿಕ್ರಿಯೆ ಇಂತಿದೆ.

ನಾನಾರ ಸಾರುವೆನೆಂದು ಚಿಂತಿಸಲೇತಕ್ಕಯ್ಯಾ ಬಸವಾ ?
ನಾನಾರ ಹೊಂದುವೆನೆಂದು ಭ್ರಮೆಬಡಲೇತಕ್ಕಯ್ಯಾ ಬಸವಾ ?
ನಾನಾರ ಇರವನರಿವೆನೆಂದು ಪ್ರಳಾಪಿಸಲೇತಕ್ಕಯ್ಯಾ ಬಸವಾ ?
ಪರಿಣಾಮಮೂರ್ತಿ ಬಸವನರೂಪು ಎನ್ನ ಕರಸ್ಥಲದಲ್ಲಿ
ಬೆಳಗಿದ ಬಳಿಕ
ಸಂಗಯ್ಯನ ಹಂಗು ನಮಗೇತಕ್ಕಯ್ಯಾ ಬಸವಾ ?

ಈ ವಚನ ಆಕೆ ಎಂಥಹ ಅನುಭಾವಿ ಎಂಬುದನ್ನು ನಿರೂಪಿಸುತ್ತದೆ. ಬದುಕಿನುದ್ದಕ್ಕೂ ಬಸವನನ್ನೇ ಉಸಿರಾಡಿದ ನೀಲಾಂಬಿಕೆ ತನ್ನೊಳಗಿನ ಅಪಾರ ದುಃಖವನ್ನು ಅದುಮಿಟ್ಟುಕೊಂಡು "ಪರಿಣಾಮಮೂರ್ತಿ ಬಸವರೂಪು" ಎಂದು ಗಂಡನನ್ನು ನೆನೆಯುತ್ತಾ "ಬಸವನೊಳಗಾನಡಗಿದೆ" ಎಂಬ ನಿಲುವನ್ನು ತಾಳುತ್ತಾರೆ.

ಕಲ್ಯಾಣದ ಕ್ರಾಂತಿಯ ನಂತರದ ಘಟನೆಗಳಿಂದಾದ ನೋವು, ದುಃಖವನ್ನು ಅದುಮಿಟ್ಟುಕೊಂಡು ಆ ಎಲ್ಲ ಘಟನೆಗಳನ್ನು ಪರಿಣಾಮಕಾಕಾಯಾಗಿ ಎದುರಿಸಿ ನಿಂತವರು ನೀಲಾಂಬಿಕೆ. ಕೂಡಲಸಂಗಮದಲ್ಲಿ ಬಸವಣ್ಣನವರು ಐಕ್ಯರಾದಾಗ ನೀಲಾಂಬಿಕೆ ದುಃಖಿಸುತ್ತಾರೆ, ಗೋಳಿಡುತ್ತಾರೆ.

ಎನಗಿನ್ನೇನು, ಎನಗಿನ್ನೇನು, ಎನಗಿನ್ನೇನು
ಎನಲೇನು ಕಾರಣ ಬಸವಾ ?
ಎನಗಿನ್ನಾವುದು ಪರಿಣಾಮದ ನೆಲೆಯಿಲ್ಲ ಬಸವಾ
ಎನಗೆ ನಿನ್ನ ರೂಪು ನಿರೂಪಾದ ಬಳಿಕ
ಭಕ್ತಿ ಸಾರಾಯದ ಪಥವನೊಲ್ಲೆನಯ್ಯಾ ಸಂಗಯ್ಯನ ಗುರುಬಸವ

ಬಸವಣ್ಣ, ಕಲ್ಯಾಣ, ಅನುಭವಮಂಟಪ ಎಲ್ಲವೂ 'ನಿರೂಪವಾದ' ಬಗೆಯ ಚಿತ್ರಣ ಈ ವಚನದಲ್ಲಿದೆ.

ಎನಗೆ ಎಲ್ಲಿಯೂ ಕಾಣಿಸದು ಇರಪರದ ಸಿದ್ಧಿಯು.
ಎನಗೆ ಏನೂ ತೋರದು ಮೂರ್ತಿಯ ಹಂಗು.
ಎನಗೇನೂ ಅರುಹಿಸದು ಇಷ್ಟದ ಪ್ರಸಾದ
ಇಹಲೋಕ ಸಂಬಂಧ ನಿರ್ಮಲಾಕಾರವಾಯಿತ್ತಯ್ಯ ಸಂಗಯ್ಯ.

ತನ್ನ ಗಂಡ ಐಕ್ಯನಾದಾಗ ಪ್ರತಿ ಹೆಣ್ಣು ದಿಕ್ಕುಗಾಣದ ತೊಳಲಾಡುತ್ತಾಳೆ. ನೀಲಾಂಬಿಕೆಯು ಸಹ ತನ್ನ ದುಃಖ ನುಂಗಲಾರದೆ ಪರಿತಪಿಸಿದ್ದಾಳೆ. ತನ್ನ ದುಃಖವನ್ನು ಎಲ್ಲ ಹೆಣ್ಣುಮಕ್ಕಳಿಗೂ ತಿಳಿಸಬೇಕೆಂಬ ರೀತಿಯಲ್ಲಿ ಕರೆಯುತ್ತಾರೆ.

ನಾಡಿನ ಹೆಣ್ಣುಗಳೆಲ್ಲಾ ಬನ್ನಿರೆ ಅಕ್ಕಗಳಿರಾ,
ಅಕ್ಕನರಸ ಬಸವಯ್ಯನು ಬಯಲ ಕಂಡು ಬಟ್ಟಬಯಲಾದನು.
ಅಕ್ಕನರಸನಿಲ್ಲದೆ ನಿರಕ್ಕರನಾದನು ಬಸವಯ್ಯನು
ನಮ್ಮ ಸಂಗಯ್ಯನಲ್ಲಿ ಬಸವಯ್ಯನೈಕ್ಯ ಬಯಲಿಲ್ಲದ ಬಯಲು.

ಬಸವಣ್ಣ ನೀಲಾಂಬಿಕೆಗೆ ನೆರಳಿಗೆ ನೆರಳಾಗಿ ಸಾಗಿದವರು. ಅಂತಹ ಬಸವಣ್ಣನನ್ನು ಕಳೆದುಕೊಂಡಾಗ ಆಕೆ ಅನುಭವಿಸಿದ ನೋವು–ದುಃಖಗಳನ್ನು ಆಕೆಯ ಅನೇಕ ವಚನಗಳಲ್ಲಿ ಕಾಣಬಹುದು. ಹಾಗೆಯೇ ತನ್ನ ವ್ಯಕ್ತಿತ್ವದ ಬೆಳೆವಣಿಗೆಗೆ ತನ್ನ ಗಂಡ ಕಾರಣವಾದ ವಿಷಯವನ್ನು ಕೃತಜ್ಞತೆಯಿಂದ ಸ್ಮರಿಸಿರುವುದನ್ನು ಅನೇಕ ವಚನಗಳಲ್ಲಿ ಕಾಣಬಹುದು.

ನೀಲಾಂಬಿಕೆಯ ವಚನಗಳೇ ಅವರಂತರಂಗದ ನಿಜ ಕನ್ನಡಿ, ಬದುಕಿನಲ್ಲಿ ತಾನು ಕಂಡು ಅನುಭವಿಸಿದ ಸತ್ಯಗಳನ್ನೇ ಆಕೆ ತನ್ನ ವಚನಗಳಲ್ಲಿ ಹಿಡಿದಿಟ್ಟಿದ್ದಾರೆ.

"ಅಲ್ಲಮನ ವಂಶದವಳು ನಾನು
ಅಜಾತ ಶರಣರ ವಂಶದವಳು ನಾನು
ಅಪ್ರತಿಮ ಶರಣರ ವಂಶದವಳು ನಾನು........"

ಎಂದು ಇಡೀ ಶರಣ ಸಂಕುಲವನ್ನು ಕೃತಜ್ಞತೆಯಿಂದ ಸ್ಮರಿಸುತ್ತಾರೆ. ಬಸವಣ್ಣ ನೀಲಾಂಬಿಕೆಯವರನ್ನು ನಡೆಸಿಕೊಂಡ ರೀತಿ, ನೀಲಾಂಬಿಕೆ ಪ್ರತಿಯಾಗಿ ನಡೆದುಕೊಂಡ ರೀತಿ–ನೀತಿಗಳು ಎಂದೆಂದಿಗೂ ಮಾದರಿಯಾದಂಥವು. "ಮನಸ್ಸಿನಲ್ಲಿ ಏಕಾಂತವೇರ್ಪಟ್ಟಾಗ ಮಾತಿನ ಹಂಗೇಕೆ ? ಅರ್ಪಿತದ ಹಂಗ ಹರಿದ ಬಳಿಕ ಅಜಾತನ ಒಲುಮೆ ಏತಕ್ಕೆ ? ಇಂತಹ ಅನೇಕ ಮಾತುಗಳಲ್ಲಿ ವೈಚಾರಿಕತೆಯ ಅಂಶಗಳನ್ನು ಕಾಣಬಹುದು. ವೈಚಾರಿಕ ಚಿಂತನೆಗಳಿಗೆ ಅವರ ವಚನಗಳು ಅಧ್ಯಯನಕ್ಕೆ ಅಸ್ಪದ ನೀಡಿವೆ. ಶಿವಯೋಗಿ ಸಿದ್ಧರಾಮರ ಒಂದು ವಚನ ನೀಲಾಂಬಿಕೆಯ ವ್ಯಕ್ತಿತ್ವ ಎಂಥದ್ದು ಎಂಬುದಕ್ಕೆ ಒಂದು ನಿದರ್ಶನ.

ಜ್ಞಾನಕ್ರಿಯಾದಿಗಳಿಂದ ಲಿಂಗದಲ್ಲಿ ನಿಬ್ಬೆರಗಾದ ನೀಲಮ್ಮನ
ಪಾದದ ಕಂದ ನಾನು, ಪಾದದ ದಾಸ ನಾನು
ಪಾದದ ಪಾದುಕೆ ನಾನು, ಪಾದುಕೆಯ ಧೂಳಿ ನಾನು
ಕಪಿಲಸಿದ್ಧ ಮಲ್ಲಿಕಾರ್ಜುನ ॥

ಒಟ್ಟಾರೆ ನೀಲಾಂಬಿಕೆಯ ವಚನಗಳನ್ನು ಓದುತ್ತಾ ಹೋದಂತೆ ಆಕೆಯ ವ್ಯಕ್ತಿತ್ವದ ಔನ್ನತ್ಯ ಪರಿಚಯವಾಗುತ್ತದೆ. ಬಸವಣ್ಣ ಮತ್ತು ನೀಲಾಂಬಿಕೆಯದ್ದು ವೈಚಾರಿಕತೆಯ ಸಂಗಮದ ದಾಂಪತ್ಯ. ಅರಿವಿನಲ್ಲಿ ಬಸವಣ್ಣನವರನ್ನು ಮೀರಿಸುವಂಥ ಶಕ್ತಿಯನ್ನು ಪಡೆದ ದಿಟಶರಣೆ ನೀಲಾಂಬಿಕೆ.

**ಆಕರ ಗ್ರಂಥಗಳು**

೧. ಡಾ. ವೀರಣ್ಣರಾಜೂರ(ಸಂ) – ಶಿವಶರಣೆಯರ ವಚನ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
೨. ಡಾ. ಹಾ.ಮಾ. ನಾಯಕ – ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ ೩, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
೩. ೩. ಡಾ. ಜಯಶ್ರೀ ದಂಡೆ – ಶರಣರ ಆಯ್ದ ವಚನಗಳ ವ್ಯಾಖ್ಯಾನ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥ ಮಾಲೆ, ಮೈಸೂರು